ವಿಷಯ:- ಸರ್ಕಾರಿ ನೌಕರರಾದ (1) ಶ್ರೀ ಎನ್ ನಟರಾಜ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬಸವನಹಳ್ಳಿ ಗ್ರಾಮ ಪಂಚಾಯತಿ (2) ಶ್ರೀ ಮುನಿರಾಮೇಗೌಡ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬಸವನಹಳ್ಳಿ ಗ್ರಾಮ ಪಂಚಾಯತಿ (3) ಶ್ರೀ ಎಸ್ ವಿ ರವೀಂದ್ರ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬಸವನಹಳ್ಳಿ ಗ್ರಾಮ ಪಂಚಾಯತಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ವಿರುದ್ಧ ಕ್ರಮಕೈಗೊಳ್ಳುವ ಕುರಿತು-ಆದೇಶ.

**ಗ್ರಾಅಪ/718/ಗ್ರಾಪಂಕಾ/2017**

1. (ಪುಟ-08) ರಲ್ಲಿರುವ ನಿಬಂಧಕರು ಕರ್ನಾಟಕ ಲೋಕಾಯುಕ್ತ ಇವರ ಪತ್ರದ ಸಂಗಡ ಲಗತ್ತಿಸಿರುವ ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಸೆಕ್ಷನ್ 12(3) ರ ಅಡಿಯಲ್ಲಿ ಸಲ್ಲಿಸಿರುವ ದಿನಾಂಕ: 14-08-2017 ರ ವರದಿಯಲ್ಲಿ (ಪುಟ-06) ಈ ಕೆಳಗಿನಂತೆ ತಿಳಿಸಿರುತ್ತಾರೆ.

2. ಶ್ರೀ ಎನ್ ಎಂ ರವಿಕುಮಾರ್, ತಂದೆ ಮುನಿಯಪ್ಪ, ನೆಲಮಂಗಲ ನಿವಾಸಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ ಎನ್ ನಟರಾಜ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬಸವನಹಳ್ಳಿ ಗ್ರಾಮ ಪಂಚಾಯತಿ (2) ಶ್ರೀ ಮುನಿರಾಮೇಗೌಡ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬಸವನಹಳ್ಳಿ ಗ್ರಾಮ ಪಂಚಾಯತಿ (3) ಶ್ರೀಮತಿ ಶೃತಿ ಗೌಡ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬಸವನಹಳ್ಳಿ ಗ್ರಾಮ ಪಂಚಾಯತಿ (4) ಶ್ರೀ ಎಸ್ ವಿ ರವೀಂದ್ರ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬಸವನಹಳ್ಳಿ ಗ್ರಾಮ ಪಂಚಾಯತಿ (5) ಶ್ರೀ ಟಿ ಎಂ ನಟರಾಜ, ಬಿಲ್ ಕಲೆಕ್ಟರ್, ಬಸವನಹಳ್ಳಿ ಗ್ರಾಮ ಪಂಚಾಯತಿ (6) ಶ್ರೀ ಎಸ್ ಹೆಚ್ ಹನಮಂತರಾಜು, ಕಾರ್ಯದರ್ಶಿ, ಬಸವನಹಳ್ಳಿ ಗ್ರಾಮ ಪಂಚಾಯತಿ (7) ಶ್ರೀ ಶಿವಕುಮಾರ್ ಮತ್ತು (8) ಶ್ರೀ ಎಲ್ ರುಕ್ಮಾಂಗದ, ಉಪನೊಂದಣಾಧಿಕಾರಿಗಳು, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದೆ "ಕ್ರಮವಾಗಿ 1 ರಿಂದ 8ನೇ ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 9 ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

3. <u>ದೂರಿನ ಸಂಕ್ಷಿಪ್ತ ವಿವರಣೆ:-</u>

ದೂರುದಾರರು ತಮ್ಮ ದೂರಿನಲ್ಲಿ ನೆಲಮಂಗಲ ತಾಲ್ಲೂಕು ಬಸವನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ಭೂಪರಿವರ್ತಿತ ನಿವೇಶನವನ್ನು ಎದುರುದಾರರ ಕರಾಮತ್ತಿನಿಂದ ಯೋಜನಾ ಪ್ರಾಧಿಕಾರದಿಂದ ಅನುಮೋದನೆ ಪಡೆಯದ ಭೂಮಿಗೆ ನಕ್ಷೆ ಮಂಜೂರಾತಿ ನೀಡಿ ಖಾತೆಗಳನ್ನು ಮಾಡಲಾಗಿರುತ್ತದೆ. ಉಪನೋಂದಣಾಧಿಕಾರಿಗಳು ನಮೂನೆ 9 ಮತ್ತು 11 ಕ್ಕೆ ರೂ.10,000/- ದಿಂದ ರೂ.20,000/- ಲಂಚ ಪಡೆದು ನೋಂದಣಿ ಮಾಡುತ್ತಿದ್ದಾರೆ. ಒಂದು ಎಕರೆ ಭೂಮಿಯನ್ನು ಭೂಪರಿವರ್ತನೆ ಮಾಡಿ ನಿವೇಶನಗಳನ್ನಾಗಿ ಮಾರಾಟ ಮಾಡಬೇಕಾದರೆ ಶೇ.45% ರಷ್ಟು ರಸ್ತೆ, ಪಾರ್ಕ ಮತ್ತು ಇನ್ನಿತರ ಜಾಗಗಳಿಗೆ ಬಿಡಬೇಕು. ಆದರೆ ಇವುಗಳನ್ನು ಉಲ್ಲಂಘಿಸಿ ನಿವೇಶನಗಳ ಖಾತೆ ಮಾಡಿ ಕ್ರಯ ಮಾಡಿತ್ತಿದ್ದಾರೆ ಆದ್ದರಿಂದ ಈ ಬಗ್ಗೆ ಪರಿಶೀಲಿಸಿ ಎದುರುದಾರರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಕೋರಿ ದೂರು ಸಲ್ಲಿಸಿದ್ದಾರೆ.

4. 1 ರಿಂದ 6ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಖಾತೆ ನಂ.813ರಲ್ಲಿ ಈ ಹಿಂದೆಯೇ ಖಾತೆದಾರರಾದ ಶ್ರೀಮತಿ ಕೆ ಲಲಿತಾ ಪ್ರಕಾಶ್ ಅವರ ಹೆಸರಿನಲ್ಲಿ 2010-11ನೇ ಸಾಲಿನಿಂದ ಕರ ನಿರ್ಧರಣಾ ಪಟ್ಟಿಯಲ್ಲಿ ಖಾತೆಗಳು ನಮೂದಾಗಿದ್ದು, ಇವರ ದಾಖಲೆಗಳನ್ನು ಪರಿಶೀಲಿಸಲಾಗಿ ಬಸವನಹಳ್ಳಿ ಗ್ರಾಮದಲ್ಲಿರುವ ಸರ್ವೇ ನಂ.71/1 ಹಾಗೂ ಇತರ ಸರ್ವೇ ನಂಬರುಗಳಲ್ಲಿ ಭೂಪರಿವರ್ತನೆಯಾಗಿರುವ ಜಮೀನನ್ನು ದಿ:01.03.2015ರಲ್ಲಿ ಶ್ರೀ ಡಿ ಕೆ ಪಾಟೀಲ್ ಮತ್ತು ಕೆ ಎಂ ಲಮಾಣಿ ಎಂಬುವವರಿಂದ ಕ್ರಯಕ್ಕೆ ಪಡೆದಿರುತ್ತಾರೆ. ಈ ಜಮೀನು ಭೂಪರಿವರ್ತನೆಯಾಗಿದ್ದು, ಡಿಮ್ಯಾಂಡ್ ರಿಜಿಸ್ಟರ್‌ನಲ್ಲಿ ಖಾತೆ ನಮೂದಾಗಿರುತ್ತದೆ. ಸದರಿ ಜಮೀನಿನಲ್ಲಿ ಯಾವುದೇ ಬಡಾವಣೆಯನ್ನು ನಿರ್ಮಿಸಿರುವುದಿಲ್ಲ ಹಾಗೂ ನಿವೇಶನಗಳನ್ನು ವಿಂಗಡಿಸಿರುವುದಿಲ್ಲ. ಜಿಲ್ಲಾಧಿಕಾರಿಗಳ ಭೂಪರಿವರ್ತನಾ ಆದೇಶದ ನಂತರ ಗ್ರಾಮ ಪಂಚಾಯತಿಯಲ್ಲಿ ಏಕವ್ಯಕ್ತಿ ಖಾತೆ ದಾಖಲಾಗಿದ್ದು, ಆ ಪ್ರಕಾರ ಸಾರ್ವಜನಿಕರಿಗೆ ಒದಗೀಸಬೇಕಾದ ಮೂಲ ಸೌಕರ್ಯಕ್ಕಾಗಿ ತೆರಿಗೆಯನ್ನು ಗ್ರಾಮ ಪಂಚಾಯತಿಗೆ ಪಾವತಿಸಿರುತ್ತಾರೆ.

5. 4ನೇ ಎದುರುದಾರರು ದಿ:04.03.2014 ರಿಂದ ಬಸವನಹಳ್ಳಿ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿದ್ದು, ಅವರು ಬಂದ ನಂತರ ಯಾವುದೇ ಹೊಸ ಖಾತೆಯನ್ನು ಮಾಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ. 5ನೇ

ವಿಷಯ:- ಸರ್ಕಾರಿ ನೌಕರರಾದ (1) ಶ್ರೀ ಎನ್ ನಟರಾಜ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬಸವನಹಳ್ಳಿ ಗ್ರಾಮ ಪಂಚಾಯತಿ (2) ಶ್ರೀ ಮುನಿರಾಮೇಗೌಡ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬಸವನಹಳ್ಳಿ ಗ್ರಾಮ ಪಂಚಾಯತಿ (3) ಶ್ರೀ ಎಸ್ ವಿ ರವೀಂದ್ರ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬಸವನಹಳ್ಳಿ ಗ್ರಾಮ ಪಂಚಾಯತಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ವಿರುದ್ಧ ಕ್ರಮಕೈಗೊಳ್ಳುವ ಕುರಿತು-ಆದೇಶ.

ಗ್ರಾಅಪ/718/ಗ್ರಾಪಂಕಾ/2017

ಎದುರುದಾರರು ತಾನು ಬಿಲ್ ಕಲೆಕ್ಟರ್ ಆಗಿದ್ದು, ಪಂಚಾಯತಿಯಲ್ಲಿ ಖಾತೆ ಮಾಡುವುದು ತನ್ನ ವ್ಯಾಪ್ತಿಗೆ ಬರದ ಕಾರಣ ಸದರಿ ಪ್ರಕರಣದಿಂದ ಕೈಬಿಡುವಂತೆ ಕೋರಿರುತ್ತಾರೆ.

6. 7 ಮತ್ತು 8ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ನೋಂದಣಿ ಕಾಯ್ದೆ 1908 ಮತ್ತು ನೋಂದಣಿ ನಿಯಮಗಳ ಪ್ರಕಾರ ಯಾವುದೇ ದಸ್ತಾವೇಜು ನೋಂದಣಿಗಾಗಿ ಹಾಜರುಪಡಿಸಿದಾಗ ಆ ದಸ್ತಾವೇಜಿನ ಸಿಂಧುತ್ವವನ್ನು ಪರಿಶೀಲಿಸುವ ಅಧಿಕಾರ ತಮಗೆ ಇರುವುದಿಲ್ಲ. ನೋಂದಣಿ ನಿಯಮ 73ರ ಪ್ರಕಾರ ಯಾವುದೇ ದಸ್ತಾವೇಜನ್ನು ಹಾಜರುಪಡಿಸಿದಾಗ ನೋಂದಣಾಧಿಕಾರಿಗಳು ನೋಂದಣಿಯಿಂದ ತಿರಸ್ಕರಿಸುವಂತಿಲ್ಲ. ಆದ್ದರಿಂದ ತಮ್ಮ ಮುಂದೆ ಹಾಜರುಪಡಿಸಿದ ದಾಖಲೆಯನ್ನು ಅದಕ್ಕೆ ತಗಲುವ ಸ್ಟಾಂಪ್ ಮತ್ತು ನೋಂದಣಿ ಶುಲ್ಕ ಭರಿಸಿಕೊಂಡು ನೋಂದಾಯಿಸಲಾಗಿದೆ. ಆದ್ದರಿಂದ ಸದರಿ ಪ್ರಕರಣದಿಂದ ತಮ್ಮನ್ನು ಕೈಬಿಡುವಂತೆ ಕೋರಿದ್ದಾರೆ. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ.

7. ದೂರುದಾರರು ಸಲ್ಲಿಸಿದ ದೂರು, ಆಕ್ಷೇಪಣೆ, ಪ್ರತ್ಯುತ್ತರ ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ ಸರ್ವೇ ನಂ.41/1 ಕ್ಷೇತ್ರ 1.36 ಎಕರೆ ಜಮೀನು ಮಾನ್ಯ ಜಿಲ್ಲಾಧಿಕಾರಿಗಳಿಂದ ದಿ:31.12.2012 ರಂದು ಭೂಪರಿವರ್ತನೆಯಾಗಿದ್ದು, ದಿ:05.12.2014ರಂದು ಪುನಃ ತಿದ್ದುಪಡಿ ಅಧಿಕೃತ ಜ್ಞಾಪನವನ್ನು ಹೊರಡಿಸಲಾಗಿರುತ್ತದೆ. ಈ ಭೂಪರಿವರ್ತನೆಯಾದ ಜಮೀನಿನ ನಕ್ಷೆಯನ್ನು ತಯಾರಿಸಿದ್ದು, ಆದರೆ ಇದನ್ನು ನಗರ ಯೋಜನಾ ಪ್ರಾಧಿಕಾರದಿಂದ ಅನುಮೋದಿಸಿರುವುದಿಲ್ಲ. ಜಿಲ್ಲಾಧಿಕಾರಿಗಳ ಭೂಪರಿವರ್ತನಾ ಆದೇಶದ ಮೇರೆಗೆ ನಿವೇಶನಗಳನ್ನು ವಿಂಗಡಿಸಿ ಖಾತೆ ಮಾಡಿದ್ದು ಅದರ ಆಧಾರದ ಮೇಲೆ ಬೇರೆ ಬೇರೆ ವ್ಯಕ್ತಿಗಳಿಗೆ ನಿವೇಶನಗಳು ಕ್ರಯವಾದ ದಾಖಲೆಗಳು ಲಭ್ಯವಿರುತ್ತದೆ.

8. ಒಂದು ಜಮೀನು ಭೂಪರಿವರ್ತನೆಯಾದ ನಂತರ ಅದರಲ್ಲಿ ವಿಧಿಸಿರುವ ಷರತ್ತುಗಳ ಪ್ರಕಾರ ಜಮೀನಿನ ನಕ್ಷೆಯನ್ನು ನಗರ ಯೋಜನಾ ಪ್ರಾಧಿಕಾರದಿಂದ ಅನುಮೋದನೆ ಮಾಡಿ ಅದರಲ್ಲಿ ಶೇ.40ರಷ್ಟು ಪ್ರದೇಶವನ್ನು ಉದ್ಯಾನವನ, ರಸ್ತೆ ಹಾಗೂ ಇತರೆ ಕೆಲಸಗಳಿಗೆ ಮೀಸಲಿಟ್ಟು ಇನ್ನುಳಿದ ಶೇ.60 ರಷ್ಟು ಜಮೀನಿನಲ್ಲಿ ಮಾತ್ರ ನಿವೇಶನವನ್ನಿ ವಿಂಗಡಿಸಿ ಖಾತೆ ಮಾಡಬೇಕಾಗುತ್ತದೆ. ಆದರೆ ಈ ಪ್ರಕರಣದಲ್ಲಿ ಜಮೀನು ಭೂಪರಿವರ್ತನೆಯಾದ ನಂತರ ನಕ್ಷೆಯು ನಗರ ಯೋಜನಾ ಪ್ರಾಧಿಕಾರದಿಂದ ನೋಂದಣಿಯಾಗದೆ ಖಾತೆ ಮಾಡಿರುವುದು ಕಂಡುಬರುತ್ತದೆ. ಗ್ರಾಮ ಪಂಚಾಯತಿಯಲ್ಲಿ ನಿವೇಶನಗಳ ಖಾತೆ ದಾಖಲಾದ ನಂತರ ಅವುಗಳನ್ನು ನೋಂದಣಿ ಕ್ರಯ ಮಾಡಿದ ದಾಖಲೆಗಳು ಲಭ್ಯವಿರುತ್ತದೆ.

9. ಈ ರೀತಿ ಕಾನೂನುಬಾಹಿರವಾಗಿ ನಿವೇಶನಗಳ ಖಾತೆ ಮಾಡಿರುವುದು 1 ರಿಂದ 4ನೇ ಎದುರುದಾರರ ಅಧಿಕಾರವಧಿಯಲ್ಲಿ ಎಂದು ಕಂಡುಬರುತ್ತದೆ. 4ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಅವರು ದಿ:04.03.2014 ರಿಂದ ಈ ಪಂಚಾಯತಿಯಲ್ಲಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ವಹಿಸಿಕೊಂಡಿದ್ದಾಗಿ ತಿಳಿಸಿದ್ದು, ಆದರೆ ಅದಕ್ಕೆ ಪುರಕ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

10. 5ನೇ ಎದುರುದಾರರು ಬಿಲ್ ಕಲೆಕ್ಟರ್ ಆಗಿದ್ದು, ಅವರಿಗೆ ಖಾತೆ ಮಾಡುವ ಅಧಿಕಾರವಿರುವುದಿಲ್ಲ ಹಾಗೂ 6ನೇ ಎದುರುದಾರರು ಕಾರ್ಯದರ್ಶಿಯಾಗಿದ್ದು ಇವರಿಗೂ ಸಹ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಇದ್ದಾಗ ಖಾತೆ ಮಾಡುವ ಅಧಿಕಾರವಿರುವುದಿಲ್ಲ. ಆದ್ದರಿಂದ 5 ಮತ್ತು 6ನೇ ಎದುರುದಾರರನ್ನು ಪ್ರಕರಣದಿಂದ ಕೈಬಿಡಲಾಗಿದೆ.

11. 7 ಮತ್ತು 8ನೇ ಎದುರುದಾರರು ಉಪ ನೋಂದಣಾಧಿಕಾರಿಗಳಾಗಿದ್ದು, ಅವರ ಮುಂದೆ ಹಾಜರುಪಡಿಸಿದ ದಾಖಲೆ ಪರಿಶೀಲಿಸಿ ಸ್ಟಾಂಪ್ ಮತ್ತು ನೋಂದಣಿ ಶುಲ್ಕ ಪಾವತಿಸಿಕೊಂಡು ದಸ್ತಾವೇಜನ್ನು ನೋಂದಣಿ ಮಾಡಬೇಕಾಗುತ್ತದೆ. ಆದ್ದರಿಂದ ಅವರು ನೋಂದಣಿ ಕಾಯ್ದೆ ಮತ್ತು ನೋಂದಣಿ ನಿಯಮದ ಪ್ರಕಾರ ಕಾರ್ಯನಿರ್ವಹಿಸಿದ್ದು, ಅವರನ್ನು ಪ್ರಕರಣದಿಂದ ಕೈಬಿಡುವುದು ಸೂಕ್ತವೆನಿಸುತ್ತದೆ.

ವಿಷಯ:- ಸರ್ಕಾರಿ ನೌಕರರಾದ (1) ಶ್ರೀ ಎನ್ ನಟರಾಜ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬಸವನಹಳ್ಳಿ ಗ್ರಾಮ ಪಂಚಾಯತಿ (2) ಶ್ರೀ ಮುನಿರಾಮೇಗೌಡ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬಸವನಹಳ್ಳಿ ಗ್ರಾಮ ಪಂಚಾಯತಿ (3) ಶ್ರೀ ಎಸ್ ವಿ ರವೀಂದ್ರ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬಸವನಹಳ್ಳಿ ಗ್ರಾಮ ಪಂಚಾಯತಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ವಿರುದ್ಧ ಕ್ರಮಕೈಗೊಳ್ಳುವ ಕುರಿತು-ಆದೇಶ.

ಗ್ರಾಅಪ/718/ಗ್ರಾಪಂಕಾ/2017

12. 1 ರಿಂದ 4ನೇ ಎದುರುದಾರರು ಅಕ್ರಮವಾಗಿ ಕಾನೂನು ಉಲ್ಲಂಘಿಸಿ ನಿವೇಶನಗಳ ಖಾತೆ ಮಾಡಿದ್ದು, ಇದರಿಂದ ಸಾರ್ವಜನಿಕರಿಗೆ ಹಾಗೂ ಕ್ರಮ ಮಾಡಿಕೊಂಡು ವ್ಯಕ್ತಿಗಳಿಗೆ ತೊಂದರೆಯಾಗಿರುವುದರಿಂದ ಇವರು ತಮ್ಮ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ. 3ನೇ ಎದುರುದಾರರು ದಿ:13.01.2017 ರಂದು ಮರಣಹೊಂದಿರುವುದಾಗಿ ತಿಳಿದುಬಂದಿರುವುದರಿಂದ ಅವರ ವಿರುದ್ಧದ ಪ್ರಕರಣವನ್ನು ಕೈಬಿಡಲಾಗಿದೆ.

13. ಆದ್ದರಿಂದ 1, 2 ಮತ್ತು 4ನೇ ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೇ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಮದ ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮಾವಳಿಗಳು, 1966ರ ನಿಯಮಗಳು 3(1) (i) ಮತ್ತು (ii)ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿರುವುದರಿಂದ, ಅವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲು ಶಿಫಾರಸ್ಸು ಮಾಡಿರುತ್ತಾರೆ.

14. ಅದರಂತೆ (1) ಶ್ರೀ ಎನ್ ನಟರಾಜ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬಸವನಹಳ್ಳಿ ಗ್ರಾಮ ಪಂಚಾಯತಿ (2) ಶ್ರೀ ಮುನಿರಾಮೇಗೌಡ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬಸವನಹಳ್ಳಿ ಗ್ರಾಮ ಪಂಚಾಯತಿ (3) ಶ್ರೀ ಎಸ್ ವಿ ರವೀಂದ್ರ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬಸವನಹಳ್ಳಿ ಗ್ರಾಮ ಪಂಚಾಯತಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆಯಾದ ಇವರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸಬಹುದಾಗಿದ್ದು ಅದರಂತೆ ಕರಡು ಆದೇಶವನ್ನು ಪುಟ-12 ರಲ್ಲಿ ಅನುಮೋದನೆಗೆ ಮಂಡಿಸಿದೆ.

ನಿಬಂಧಕರು ತಮ್ಮ ಪತ್ರದಲ್ಲಿ ಸೂಚಿಸಿದಂತೆ ಶುದ್ಧ ಪ್ರತಿಯೊಂದಿಗೆ ಪ್ರಕರಣಕ್ಕೆ ಸಂಬಂಧಪಟ್ಟ ಮೂಲ ದಾಖಲೆಗಳನ್ನು ಹಿಂತಿರುಗಿಸಬಹುದಾಗಿದೆ.

06/09/17

15. ಪೀ)

ಕಂಡಿಕೆ 1 ರಿಂದ 14 ರವರೆಗೆ ಪರಿಶೀಲಿಸಲಾಗಿದ್ದು, ಈ ಪ್ರಕರಣದ (1) ಶ್ರೀ ಎನ್ ನಟರಾಜ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬಸವನಹಳ್ಳಿ ಗ್ರಾಮ ಪಂಚಾಯತಿ (2) ಶ್ರೀ ಮುನಿರಾಮೇಗೌಡ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬಸವನಹಳ್ಳಿ ಗ್ರಾಮ ಪಂಚಾಯತಿ (3) ಶ್ರೀ ಎಸ್ ವಿ ರವೀಂದ್ರ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬಸವನಹಳ್ಳಿ ಗ್ರಾಮ ಪಂಚಾಯತಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆಯಾದ ಇವರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು

ವಿಷಯ:- ಸರ್ಕಾರಿ ನೌಕರರಾದ (1) ಶ್ರೀ ಎನ್ ನಟರಾಜ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬಸವನಹಳ್ಳಿ ಗ್ರಾಮ ಪಂಚಾಯತಿ (2) ಶ್ರೀ ಮುನಿರಾಮೇಗೌಡ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬಸವನಹಳ್ಳಿ ಗ್ರಾಮ ಪಂಚಾಯತಿ (3) ಶ್ರೀ ಎಸ್ ವಿ ರವೀಂದ್ರ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬಸವನಹಳ್ಳಿ ಗ್ರಾಮ ಪಂಚಾಯತಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ವಿರುದ್ಧ ಕ್ರಮಕೈಗೊಳ್ಳುವ ಕುರಿತು-ಆದೇಶ.

ಗ್ರಾಅಪ/718/ಗ್ರಾಪಂಕಾ/2017

---

ಮಾನ್ಯ ಉಪಲೋಕಾಯುಕ್ತರಿಗೆ ವಹಿಸಬಹುದಾಗಿದೆ. ಈ ಪ್ರಸ್ತಾವನೆಯನ್ನು ಪ್ರಧಾನ ಕಾರ್ಯದರ್ಶಿಯವರ ಅನುಮೋದನೆ ಪಡೆಯಬಹುದಾಗಿದೆ.

ಕಂಡಿಕೆ (15)ನ್ನು ಅನುಮೋದಿಸಬಹುದಾಗಿದೆ.

ನಿರ್ದೇಶಕರು(ಪಂ.ರಾಜ್-1)

18) ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್)

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ

ಎಚ್.ಕೆ. ಪಾಟೀಲ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು